# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ
## ಸಿ.ಸಿ. ನಂ. 57 / 2019

ಸಿಡಬ್ಲ್ಯೂ- **32**
ಪಿಡಬ್ಲ್ಯೂ- **15**

ದಿನಾಂಕಃ **30.10.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಪ್ರಭಾಕರ |
| ತಂದೆಯ ಹೆಸರುಃ | - | ಶರಣಪ್ಪ |
| ವಯಸ್ಸುಃ | - | **46** ವರ್ಷ |
| ಉದ್ಯೋಗಃ | - | ಹಿರಿಯ ಮೋಟಾರು ವಾಹನ ನೀರಿಕ್ಷಕರು ಕಲಬುರಗಿ. |
| ವಾಸಸ್ಥಳಃ | - | ಕಲಬುರಗಿ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

2017 ರಿಂದ 2018ರ ವರೇಗೆ ಮೋಟಾರು ವಾಹನ ನೀರಿಕ್ಷಕನ್ನಾಗಿ ಯಾದಗಿರಿಯ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 06.06.2018 ರಂದು ಸಿ.ಪಿ.ಐ ಯಾದಗಿರಿ ರವರ ಮನವಿಯ ಮೇರೆಗೆ ಸದರಿ ದಿನಾಂಕದಂದು ಮದ್ಯಾಹ್ನ 3 ಗುಂಟೆಗೆ ಗ್ರಾಮೀಣ ಪೊಲೀಸ್ ಠಾಣೆಗೆ ಭೇಟಿ ನೀಡಿ ಈ ಪ್ರಕರಣದಲ್ಲಿ ದಾಖಲಾದ ವಾಹನ ಸಂಖ್ಯೆಃ ಕೆಎ-36-ಎಮ್-1306 ಹಾಗೂ ಕೆಎ-22-ಬಿ-7049 ನೇದ್ದವುಗಳನ್ನು ಪರೀಕ್ಷಿಸಿರುತ್ತೇನೆ. ವಾಹನ ಸಂಖ್ಯೆಃ ಕೆಎ-36-ಎಮ್-1306 ನೇದ್ದಕ್ಕೆ ಈ ಕೆಳಗಿನ ಜಖಂಗಳು ಆಗಿದ್ದವು,

1. ಸದರಿ ವಾಹನದ ಮುಂದಿನ ಎರಡು ಹೆಡ್ ಲೈಟ್ಸ್ ಜಖಂಗೊಂಡಿದ್ದವು.
2. ಸದರಿ ವಾಹನದ ಇಂಜಿನ್ ಬಾನೇಟ್ ಜಖಂಗೊಂಡಿತ್ತು.
3. ಸದರಿ ವಾಹನದ ಮೇಲ್ಚವಣಿ ಜಖಂಗೊಂಡಿತ್ತು.
4. ಸದರಿ ವಾಹನದ ಸ್ಟೇರಿಂಗ್ ಜಖಂಗೊಂಡಿತ್ತು.
5. ಸದರಿ ವಾಹನದ ಬ್ಯಾಟರಿ ಜಖಂಗೊಂಡಿತ್ತು.
6. ಸದರಿ ವಾಹನದ ರೆಡಿಯೇಟರ್ ಜಖಂಗೊಂಡಿತ್ತು.
7. ಸದರಿ ವಾಹನದ ಮುಂದಿನ ಬಲಭಾಗದ ಮಡಗಾರ್ಡ್ ಜಖಂಗೊಂಡಿತ್ತು.

ವಾಹನ ಸಂಖ್ಯೆಃ ಕೆಎ-22-ಬಿ-7049 ನೇದ್ದಕ್ಕೆ ಈ ಕೆಳಗಿನ ಜಖಂಗಳು ಆಗಿದ್ದವು,

1. ಸದರಿ ವಾಹನದ ಮುಂದಿನ ವಿಂಡ್‌ಸ್ಕ್ರೀನ್ ಗಾಜು ಜಖಂಗೊಂಡಿತ್ತು.
2. ಸದರಿ ವಾಹನದ ಮುಂದಿನ ಕ್ಯಾಬಿನ್ ಜಖಂಗೊಂಡಿತ್ತು.
3. ಸದರಿ ವಾಹನದ ಬಲಬದಿಯ ಹೆಡ್ ಲೈಟ್ ಹಾಗೂ ಇಂಡಿಕೇಟರ್ ಜಖಂಗೊಂಡಿತ್ತು.
4. ಸದರಿ ವಾಹನದ ಬಲಬದಿಯ ಭಾಗ ಜಖಂಗೊಂಡಿತ್ತು.
5. ಸದರಿ ವಾಹನದ ಬಲಬದಿಯ ಬಂಪರ್ ಜಖಂಗೊಂಡಿತ್ತು.
6. ಸದರಿ ವಾಹನದ ಬಲ ಭಾಗ ಜಖಂಗೊಂಡಿತ್ತು.
7. ಸದರಿ ವಾಹನದ ರೆಡಿಯೇಟರ್‌ಗ್ರೀಲ್ ಜಖಂಗೊಂಡಿತ್ತು.

ಈ ಎರಡು ವಾಹನಗಳನ್ನು ನಾನು ಪರೀಕ್ಷಿಸಿರುತ್ತೇನೆ ಅವುಗಳ ಅಡೆತಡೆಗಳು ಸುಸ್ಥಿತಿಯಲ್ಲಿ ಇದ್ದವು. ಈ ಪ್ರಕರಣದ ಅಪಘಾತವು ವಾಹನಗಳ ಯಂತ್ರಿಕದೋಶದಿಂದ ಅಪಘಾತ ಆಗಿರುವುದಿಲ್ಲ. ಈ ಬಗ್ಗೆ ನಾನು ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 23 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 23(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಜಿ.ಬಿ.ಆರ್.ರವರಿಂದಃ</u>

ಅಪಘಾತಕಿಡದ ಎರಡು ವಾಹನಗಳನ್ನು ಪೊಲೀಸ್ ಠಾಣಾ ಆವರಣದಲ್ಲಿ ಅವುಗಳನ್ನು ನಾನು ಪರೀಕ್ಷಿಸಿರುತ್ತೇನೆ. ಅಪಘಾತಕಿಡದ ಎರಡು ವಾಹನಗಳ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ವಾಹನದ ದಾಖಲೆಗಳ ಬಗ್ಗೆ ತನಿಖಾಧಿಕಾರಿಗಳು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಅಪಘಾತಕಿಡದ ಎರಡು ವಾಹನಗಳನ್ನು ನಾನು ಪರೀಕ್ಷೆ ಮಾಡುವುದಕ್ಕಿಂತ ಮುಂಚೆ ನಾನು ಅಪಘಾತ ಸ್ಥಳಕ್ಕೆ ಹೋಗಿರುವುದಿಲ್ಲ. ಪೊಲೀಸರ ಮನವಿಯ ಮೇರೆಗೆ ನೀವು ನಿಪಿ 23 ನ್ನು ನೀಡಿರುತ್ತೀರಿ ಎಂದರೆ ಸಾಕ್ಷಿಯು ಪೊಲೀಸರ ಮನವಿ ಬಂದ ನಂತರ ನಾನು ವಾಹನಗಳನ್ನು ಪರೀಕ್ಷಿಸಿ ನಿಪಿ 23 ನ್ನು ನೀಡಿರುತ್ತೇನೆ ಎಂದು ಹೇಳುತ್ತಾರೆ. ಯಾರ ತಪ್ಪಿನಿಂದ ಅಪಘಾತ ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಸಮಾನ್ಯವಾಗಿ ಎಲ್ಲಾ ವಾಹನಗಳ ಮಾಹಿತಿಯು ನಮ್ಮ ಕಚೇರಿಯಲ್ಲಿ ದೊರೆಯುತ್ತವೆ ಎಂದರೆ ಸರಿ. ಅದೇ ರೀತಿ ವಾಹನಗಳ ಚಾಲನಾ ಪ್ರಮಾಣ ಪತ್ರದ ಮಾಹಿತಿಯು ಸಹ ನಿಮ್ಮ ಕಚೇರಿಯಲ್ಲಿ ದೊರೆಯುತ್ತದೆ ಎಂದರೆ ಸಾಕ್ಷಿಯು ಸದರಿ ವಾಹನ ಚಾಲನಾ ಪ್ರಮಾಣ ಪತ್ರದ ನೊಂದಣಿ ಸಂಖ್ಯೆ ಇದ್ದಾರೆ ಚಾಲನಾ ಪ್ರಮಾಣ ಪತ್ರಗಳ ಮಾಹಿತಿ ದೊರೆಯುತ್ತದೆ ಎಂದು ಹೇಳುತ್ತಾರೆ.

ಸಮಾನ್ಯವಾಗಿ ಚಾಲನಾ ಪ್ರಮಾಣ ಪತ್ರ ಹೊಂದಿದ್ದವರು ವಾಹನವನ್ನು ಸಮರ್ಪಕವಾಗಿ ಅವರು ಚಲಾಯಿಸುತ್ತಾರೆ ಎಂದರೆ ಸರಿ. ನಾನು ಅಪಘಾತಕಿಡದ ವಾಹನಗಳನ್ನು ಪರೀಕ್ಷೆ ಮಾಡದೇ ನನ್ನ ಕಚೇರಿಯಲ್ಲಿ ಕುಳಿತು ನಿಪಿ 23 ನ್ನು ತಯಾರಿಸಿ ಪೊಲೀಸರಿಗೆ ನೀಡಿದ್ದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.